ಉ) ರಸ್ತೆ ಸೇತುವೆ ಹಾಗೂ ಇನ್ನುಳಿದ ಆಸ್ತಿಪಾಸ್ತಿಗಳ ನಷ್ಟವನ್ನು ಸರಿಪಡಿಸಲು ಸರ್ಕಾರವು ಆಗ ೨೩೪.೭೮ ಲಕ್ಷ ರೂಪಾಯಿಗಳನ್ನು ವಿನಿಯೋಗಿಸಿತು.

ಊ) ೪೩೩.೭೬ ಲಕ್ಷ ರೂಪಾಯಿಗಳನ್ನು ಪರಿಹಾರ ಕಾಮಗಾರಿಗಳಿಗಾಗಿ ಖರ್ಚು ಮಾಡಿದೆ.

ಋ) ೧೯೮೫-೮೪ ಸಾಲಿನಲ್ಲಿ ಕರ್ನಾಟಕದ ನೆರೆ ಸಂತ್ರಸ್ತರಿಗಾಗಿ ಕೇಂದ್ರ ಸರ್ಕಾರವು ೩೨೯.೩೪ ಲಕ್ಷ ರೂಪಾಯಿಗಳ ಕೇಂದ್ರ ನೆರವಿನ ಮಿತಿಯನ್ನು ನಿಗಧಿಪಡಿಸಿತ್ತು.

ಶೇಂದಿಯ ಮುಕ್ತ ಮಾರಾಟ

೧೩೩(೪೦೩) ಶ್ರೀ ಕೆ. ವಸಂತ ಬಂಗೇರ(ಬೆಳ್ತಂಗಡಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಅಬ್ಕಾರಿ ರಾಜ್ಯ ಮಂತ್ರಿಯವರು ದಯೆಯಿಟ್ಟು ಉತ್ತರಿಸುವರೆ :—

ಅ) ಬಿಲ್ಲವ ಜನಾಂಗದವರು ತಮ್ಮ ಕುಲಕಸುಬಾದ ಮೂರ್ತೆಯನ್ನು ಮಾಡಿ ಗಳಿಸಿದ ಶೇಂದಿಯನ್ನು ಮುಕ್ತವಾಗಿ ಮಾರಾಟ ಮಾಡುವ ಅವಕಾಶವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೂರ್ತೆದಾರರು ಗಳಿಸಿದ ಶೇಂದಿಯನ್ನು ಸರ್ಕಾರಿ ಹರಾಜಿನಲ್ಲಿ ಪಡೆದ ಕಂಟ್ರಾಕ್ಟ ದಾರರಿಗೇನೇ ವಿಕ್ರಯಿಸಬೇಕಾದ ಅವಶ್ಯಕತೆಯೇನು?

ಇ) ಇತರ ಜನಾಂಗದ ಕುಲಕಸುಬುದಾರರಿಗೆ ಈ ರೀತಿ ತೊಂದರೆಯಿದೆಯೇ?

ಈ) ಮೂರ್ತೆದಾರರು ಗಳಿಸಿದಂತಹ ಶೇಂದಿಯನ್ನು ಅವರೇ ಮುಕ್ತ ಮಾರಾಟ ಮಾಡುವಂತೆ ಅವಕಾಶ ಕಲ್ಪಿಸಲು ಸರ್ಕಾರ ಆಲೋಚಿಸಿದೆಯೇ ?

ಶ್ರೀ ರಮೇಶ್ ಸಿ. ಜಿಗಜಿಣಗಿ(ಮಾನ್ಯ ಅಬ್ಕಾರಿ ರಾಜ್ಯ ಮಂತ್ರಿಗಳು):—

ಅ) ಕರ್ನಾಟಕ ಅಬಕಾರಿ(ಮಧ್ಯದ ಬಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ)ನಿಯಮ ೧೯೬೯ ರ ಪ್ರಕಾರ ಮಾತ್ರ ಶೇಂದಿಯನ್ನು ಮಾರಾಟ ಮಾಡಬಹುದು.

ಆ) ಹೌದು, ಮೇಲಿನ ನಿಯಮಗಳ ಪ್ರಕಾರ.

ಇ) ಮತ್ತು ಈ) ಮತ್ತು ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಗ್ರಾಮ ಸಹಾಯಕರಿಗೆ ಹೆಚ್ಚಿನ ವೇತನ ಸೌಲಭ್ಯ ನೀಡಂವ ಬಗ್ಗೆ

೧೩೪(೭೬೨)ಶ್ರೀ ಕುಶಾಲ(ಸೂಳ್ಯ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಂದಾಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಜನ ಗ್ರಾಮ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ ?

ಆ) ಈ ಗ್ರಾಮ ಸಹಾಯಕರಿಗೆ ಕೇವಲ ರೂ.೧೨೦-೮೦ ಮಾತ್ರ ನೀಡಲಾಗುತ್ತಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಸರ್ಕಾರದ '(ಡಿ)' ಗುಂಪಿನ ನೌಕರರಿಗೆ ನೀಡಲಾಗುತ್ತಿರುವ ವೇತನ ಮತ್ತು ಇತರ ಸೌಲಭ್ಯಗಳನ್ನು ಗ್ರಾಮ ಸಹಾಯಕರಿಗೂ ನೀಡಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಈಗ ರಾಜ್ಯದಲ್ಲಿ ೯೧೫೨ ಗ್ರಾಮ ಸಹಾಯಕರು ಕೆಲಸ ಮಾಡುತ್ತಿದ್ದಾರೆ.

ಆ) ಹೌದು. ತಿಂಗಳಿಗೆ ೧೨೦ ರೂ. ಸಂಭಾವನೆಯನ್ನು ಕೊಡಲಾಗುತ್ತಿದೆ.

ಇ) ಗ್ರಾಮ ಸಹಾಯಕರ ಹುದ್ದೆಗಳು ಸ್ಟೈಪಂಡರಿ ಹುದ್ದೆಗಳಾಗಿದ್ದು ಅವರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುವುದರಿಂದ ಇವರನ್ನು ಸರ್ಕಾರಿ ನೌಕರರೆಂದಾಗಲಿ ಅಥವಾ ಯಾವುದೇ